# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 734 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| 3) | ಉತ್ತರಿಸಬೇಕಾದ ದಿನಾಂಕ | 11.12.2023 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ವಿಜಯಪುರ ಜಿಲ್ಲೆಯಾದ್ಯಂತ ಕೌಶಲ್ಯಾಭಿವೃದ್ಧಿ ಇಲಾಖೆ ವತಿಯಿಂದ ಕಳೆದ 2 ವರ್ಷಗಳಿಂದ ಕೈಗೊಂಡಿರುವ ಯೋಜನೆಗಳೇನು; (ತಾಲ್ಲೂಕುವಾರು ವಿವರ ನೀಡುವುದು) | **ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ**<br>ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯು 2021-22ನೇ ಸಾಲಿನಲ್ಲಿ ಮೊದಲ ಹಂತದಲ್ಲಿ ರಾಜ್ಯದ 150 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು M/s.TATA Technologies Ltd. ರವರ ಸಹಭಾಗಿತ್ವದಲ್ಲಿ **'ಉದ್ಯೋಗ'** ಯೋಜನೆಯಡಿಯಲ್ಲಿ ಉನ್ನತೀಕರಿಸಲಾಗಿರುತ್ತದೆ.<br><br>ವಿಜಯಪುರ ಜಿಲ್ಲೆಯ 06 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು 2021-22ನೇ ಸಾಲಿನಲ್ಲಿ 'ಉದ್ಯೋಗ ಯೋಜನೆ' ಅಡಿಯಲ್ಲಿ ಮೆ.ಟಾಟಾ ಟೆಕ್ನಾಲಜಿಸ್ ರವರ ಸಹಯೋಗದೊಂದಿಗೆ ಮೇಲ್ದರ್ಜೆಗೇರಿಸಲಾಗಿದೆ. ತಾಲ್ಲೂಕುವಾರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ವಿವರ ಈ ಕೆಳಗಿನಂತಿದೆ.<br><br>**ಕ್ರ.ಸಂ / ಸರ್ಕಾರಿ ಐ.ಟಿ.ಐ.ಗಳ ಹೆಸರು / ತಾಲೂಕು**<br>1 / ಬಬಲೇಶ್ವರ / ವಿಜಯಪುರ<br>2 / ಬಸವನ ಬಾಗೇವಾಡಿ / ವಿಜಯಪುರ<br>3 / ವಿಜಯಪುರ / ವಿಜಯಪುರ<br>4 / ನಲತವಾಡ / ಮುದ್ದೇಬಿಹಾಳ<br>5 / ತಿಕೋಟ / ವಿಜಯಪುರ<br>6 / ಇಂಡಿ / ಇಂಡಿ<br><br>1961 ಶಿಶಿಕ್ಷು ಕಾಯ್ದೆಯನುಸಾರ ವಿಜಯಪುರ ಜಿಲ್ಲೆಯಲ್ಲಿ ಶಿಶಿಕ್ಷು ತರಬೇತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದ್ದು ಈ ಯೋಜನೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ವಿಜಯಪುರ ಜಿಲ್ಲೆಯ 6 ತಾಲ್ಲೂಕುಗಳಲ್ಲಿ, ಇಲಾಖಾ ವತಿಯಿಂದ 5 ಸಂಖ್ಯೆಯ ತಾಲ್ಲೂಕುವಾರು ಸಹಾಯಕ ಶಿಶಿಕ್ಷು ಸಲಹೆಗಾರರನ್ನು ಹಾಗೂ ಜಿಲ್ಲೆಗೆ ಒಬ್ಬರಂತೆ ನೋಡಲ್ ಅಧಿಕಾರಿಯನ್ನು ಸಹ ನೇಮಿಸಲಾಗಿದೆ.<br><br>2023-24ನೇ ಸಾಲಿನ ಜುಲೈ 2023ರ ಆಯವ್ಯಯ ಘೋಷಣೆಯಲ್ಲಿ ಕಂಡಿಕೆ 199ರಲ್ಲಿ "ರಾಜ್ಯದಲ್ಲಿ 50 ವರ್ಷಗಳನ್ನು ಪೂರೈಸಿದ 12 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪಾರಂಪರಿಕ ಸಂಸ್ಥೆಗಳೆಂದು ಘೋಷಿಸಿ ಕೈಗಾರಿಕೆಗಳ ಬೇಡಿಕೆಗೆ ಅನುಗುಣವಾಗಿ ಅಭಿವೃದ್ಧಿಪಡಿಸಲಾಗುವುದು,<br>ಈ ಸಂಬಂಧ ನಿರ್ಮಾಣ ಕಾರ್ಯ ಹಾಗೂ ಹೊಸ ಉಪಕರಣಗಳು ಮತ್ತು ಯಂತ್ರೋಪಕರಣಗಳ ಖರೀದಿಗಾಗಿ 100 ಕೋಟಿ ರೂ.ಗಳನ್ನು ವಿನಿಯೋಗಿಸಲು ಉದ್ದೇಶಿಸಲಾಗಿದೆ ಎಂದು ಘೋಷಿಸಲಾಗಿದ್ದು, ಈ ಯೋಜನೆಯಡಿ |

ವಿಜಯಪುರ ಜಿಲ್ಲೆಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ವಿಯಜಯಪುರ ಸಂಸ್ಥೆಯನ್ನು ಉನ್ನತೀಕರಿಸಲು ಗುರುತಿಸಲಾಗಿದೆ.

**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ**

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಕೇಂದ್ರ ಸರ್ಕಾರ ಪ್ರಾಯೋಜಿತ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಗಳನ್ನು ಜಾರಿಗೊಳಸಲಾಗುತ್ತಿದೆ. ಈ ಯೋಜನೆಗಳಲ್ಲಿ ರಾಜ್ಯದ ಯುವಜನತೆಗೆ ವಿವಿಧ ಜಾಬ್‌ರೋಲ್‌ಗಳಲ್ಲಿ ಕೌಶಲ್ಯ ತರಬೇತಿ ನೀಡಲಾಗುತ್ತಿದೆ. ಕಳೆದ 2 ವರ್ಷಗಳಲ್ಲಿ ವಿಜಯಪುರ ಜಿಲ್ಲೆಯಲ್ಲಿ ಸದರಿ ಯೋಜನೆಗಳಲ್ಲಿ ತರಬೇತಿ ಪಡೆದವರ ವಿವರವನ್ನು **ಅನುಬಂಧ-1ರಲ್ಲಿ** ಲಗತ್ತಿಸಿದೆ.

**ರಾಷ್ಟ್ರೀಯ ಜೀವನೋಪಾಯ ಅಭಿಯಾನ**
**(ದೀನ್‌ದಯಾಳ್-ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ)**

ರಾಷ್ಟ್ರೀಯ ಜೀವನೋಪಾಯ ಅಭಿಯಾನದ ಡೇ-ಎನ್‌ಯುಎಲ್‌ಎಂ ಯೋಜನೆಯಡಿ ಕಳೆದ ಎರಡು ವರ್ಷಗಳಿಂದ ನಗರ ಸ್ಥಳೀಯ ಸಂಸ್ಥೆವಾರು ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸಲಾಗುತ್ತಿದೆ.

1) ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ:
ಈ ಉಪಘಟಕದಡಿ ಮಹಿಳಾ ಸ್ವ-ಸಹಾಯ ಸಂಘ, ಪ್ರದೇಶ ಮಟ್ಟದ ಒಕ್ಕೂಟಗಳ ರಚನೆ ಹಾಗೂ ಸ್ವ-ಸಹಾಯ ಸಂಘಗಳಿಗೆ ರೂ.10,000/- ಮತ್ತು ಒಕ್ಕೂಟಗಳಿಗೆ ರೂ.50,000/- ಆವರ್ತಕ ನಿಧಿ ವಿತರಣೆ ಹಾಗೂ ಸಂಘ ಮತ್ತು ಒಕ್ಕೂಟದ ಸದಸ್ಯರುಗಳಿಗೆ ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

2) ಸ್ವಯಂ ಉದ್ಯೋಗ ಕಾರ್ಯಕ್ರಮ:

ಈ ಉಪಘಟಕದಡಿ ವೈಯಕ್ತಿಕ ಕಿರು ಉದ್ದಿಮೆ, ಗುಂಪು ಕಿರು ಉದ್ದಿಮೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ಗೆ ಸಂಬಂಧಿಸಿದಂತೆ ಕ್ರಮವಾಗಿ ಬ್ಯಾಂಕಿನಿಂದ ರೂ.2.00ಲಕ್ಷ ರೂ.10.00 ಲಕ್ಷ ಮತ್ತು ರೂ.1.00 ಲಕ್ಷವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು. ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು ಹಾಗೂ ಸ್ವ-ಸಹಾಯ ಸಂಘಗಳು ನಿಯಮಿತವಾಗಿ ಸಾಲವನ್ನು ಮರು ಪಾವತಿಸಿದರೆ ಶೇ.3 ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ ನೀಡಲಾಗುವುದು ಹಾಗೂ ಉದ್ಯಮಶೀಲತಾ ತರಬೇತಿಯನ್ನು ನೀಡಲಾಗುವುದು.

3) ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ:
ಈ ಉಪಘಟಕದಡಿ ನಗರದ ನಿರುದ್ಯೋಗ ಯುವಕ / ಯುವತಿಯರಿಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಿ, ಪ್ರಮಾಣೀಕರಣ ಮತ್ತು ಮೌಲ್ಯಮಾಪನವನ್ನು ಕೈಗೊಂಡು, ಕೇಂದ್ರ ಸರ್ಕಾರದ ಪ್ರಮಾಣ ಪತ್ರವನ್ನು ನೀಡಿ, ತರಬೇತಿಯನ್ನು ಪಡೆದುಕೊಂಡ ಶೇ.70 ರಷ್ಟು ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಅಥವಾ ವೇತನಾಧಾರಿತ ಉದ್ಯೋಗವನ್ನು ಕಲ್ಪಿಸಲಾಗುವುದು.

4)ನಗರದ ವಸತಿ ರಹಿತರಿಗೆ ಆಶ್ರಯ:
ಈ ಉಪಘಟಕದಡಿ ನಗರದ ವಸತಿ ರಹಿತರನ್ನು ರ್ಯಾಪಿಡ್ ಸಮೀಕ್ಷೆಯ ಮೂಲಕ ಗುರುತಿಸಿ, ಆಶ್ರಯವನ್ನು ಕಲ್ಪಿಸಲಾಗುವುದು.

5)ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ:
ಈ ಉಪಘಟಕದಡಿ ನಗರದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.

6)ಸಾಮರ್ಥ್ಯ ಅಭಿವೃದ್ಧಿ ಮತ್ತು ತರಬೇತಿ:
ಈ ಉಪಘಟಕದಡಿ ಅಭಿಯಾನವನ್ನು ಅನುಷ್ಠಾನಗೊಳಿಸಲು ತೊಡಗಿಸಿಕೊಂಡಿರುವ ಅಧಿಕಾರಿ / ಸಿಬ್ಬಂದಿಗಳಿಗೆ ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ.

**ಸಂಜೀವಿನಿ- ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆ (ಡೇ-ಎನ್‌ಆರ್‌ಎಲ್‌ಎಂ)**

ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಯೋಜನೆಯಡಿಯಲ್ಲಿ ವಿಜಯಪುರ ಜಿಲ್ಲೆಯಾದ್ಯಂತ ಕೈಗೊಂಡಿರುವ ಯೋಜನೆಗಳು ಈ ಕೆಳಕಂಡಂತಿವೆ.
1)ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆ.
2)ದೀನ್‌ದಯಾಳ್-ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ.
3)ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ.

(ಈ ಯೋಜನೆಯಡಿಯ ಪ್ರಗತಿಯ ವಿವರವನ್ನು **ಅನುಬಂಧ-2ರಲ್ಲಿ** ಲಗತ್ತಿಸಿದೆ.)

**ಸಿಡಾಕ್**

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ - ಸಿಡಾಕ್ ಸಂಸ್ಥೆಗೆ ತಾಲ್ಲೂಕುವಾರು ಅನುದಾನ ಬಿಡುಗಡೆಯಾಗುವುದಿಲ್ಲ. ರಾಜ್ಯವಾರು ಅನುದಾನ ಬಿಡುಗಡೆಯಾಗುತ್ತಿದ್ದು ಸದರಿ ಅನುದಾನದಲ್ಲಿ ವಿವಿಧ ಉದ್ಯಮಶೀಲತಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಕಳೆದ 2 ವರ್ಷಗಳಲ್ಲಿ ವಿಜಯಪುರ ಜಿಲ್ಲೆಯಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳ ವಿವರ ಈ ಕೆಳಗಿನಂತಿದೆ.

| **ವರ್ಷ** | **ತರಬೇತಿ ಹೊಂದಿದ ಅಭ್ಯರ್ಥಿಗಳ ಸಂಖ್ಯೆ** | **ಖರ್ಚಾದ ಮೊತ್ತ (ರೂ. ಲಕ್ಷಗಳಲ್ಲಿ)** |
|---|---|---|
| 2021-22 | 366 | 5.17 |
| 2022-23 | 372 | 2.49 |

(ಆ) ಕೌಶಲ್ಯಾಭಿವೃದ್ಧಿಯಿಂದ ಯಾವ ಯಾವ ಜನತೆಗೆ ಕೌಶಲ್ಯಾಭಿವೃದ್ಧಿ ಬಗ್ಗೆ ಅರಿವು ಮೂಡಿಸಲಾಗಿದೆ; ಇದರಿಂದ ಎಷ್ಟು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗಿದೆ; ಆಗಿರುವ ಅನುಕೂಲಗಳೇನು? (ವಿವರ ನೀಡುವುದು)

**ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ**

ಕೌಶಲ್ಯಾಭಿವೃದ್ಧಿಯಿಂದ ಬಹುತೇಕ ಎಲ್ಲಾ ಜನತೆಗೆ ಪ್ರಮುಖವಾಗಿ ಎಸ್.ಎಸ್.ಎಲ್.ಸಿ. ಉತ್ತೀರ್ಣಗೊಂಡಿರುವ ಹಾಗೂ ಅನುತ್ತೀರ್ಣಗೊಂಡಿರುವ ಯುವಜನತೆಗೆ ಕೌಶಲ್ಯಾಭಿವೃದ್ಧಿ ಬಗ್ಗೆ ಅರಿವು ಮೂಡಿಸಲಾಗಿದೆ. ಇದರಿಂದಾಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರವೇಶ ಕಾರ್ಯಕ್ಕೆ ಅನುಕೂಲಗಳಾಗಿದ್ದು, ಕಳೆದ 2 ವರ್ಷಗಳ ಪ್ರವೇಶ ವಿವರಗಳು ಈ ಕೆಳಕಂಡಂತಿವೆ.

| ವಿಜಯಪುರ ಜಿಲ್ಲೆಯಲ್ಲಿರುವ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರವೇಶ ವಿವರ | | | |
|---|---|---|---|
| ಕ್ರಮ ಸಂಖ್ಯೆ | ಐಟಿಐ ವಿವರ | ಪ್ರವೇಶ ವಿವರ | |
| | | 2022 | 2023 |
| 1 | ಸರ್ಕಾರಿ | 871 | 1078 |
| 2 | ಅನುದಾನಿತ | 575 | 574 |
| 3 | ಖಾಸಗಿ | 2080 | 2474 |
| | ಒಟ್ಟು | 3526 | 4126 |

2) Directorate General of Training (DGT) ನವದೆಹಲಿರವರ ಮಾರ್ಗಸೂಚಿಯಂತೆ', ಉದ್ದಿಮೆದಾರರಿಗೆ ಮತ್ತು ಶಿಶಿಕ್ಷು ತರಬೇತಿದಾರರಿಗೆ ಶಿಶಿಕ್ಷು ತರಬೇತಿ ಯೋಜನೆಯ ಮಹತ್ವದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಪ್ರತಿ ಮಾಹೆ 2ನೇ ಸೋಮವಾರದಂದು ರಾಜ್ಯಾದ್ಯಂತ ಕನಿಷ್ಠ 10 ಜಿಲ್ಲೆಗಳಲ್ಲಿ

| | |
|---|---|
| | ಶಿಶಿಕ್ಷು ಮೇಳಗಳನ್ನು ಆಯೋಜಿಸಲಾಗುತ್ತಿದೆ, ಇದರನುಸಾರ ವಿಜಯಪುರ ಜಿಲ್ಲೆಯಾದ್ಯಂತ ಕಳೆದ ಎರಡು ವರ್ಷಗಳಲ್ಲಿ 6 ಶಿಶಿಕ್ಷು ಮೇಳಗಳನ್ನು ಆಯೋಜಿಸಲಾಗಿದೆ, 16 ಸಂಖ್ಯೆಯ ಉದ್ದಿಮೆದಾರರು ಹಾಗೂ ಒಟ್ಟಾರೆ 500 ವಿದ್ಯಾರ್ಥಿಗಳು ಭಾಗವಹಿಸಿದ್ದು ಇದರಲ್ಲಿ 22 ವಿದ್ಯಾರ್ಥಿಗಳು ಆಯ್ಕೆಯಾಗಿ ತರಬೇತಿ ಪಡೆಯುತ್ತಿರುತ್ತಾರೆ.<br><br>ಸಹಾಯಕ ಶಿಶಿಕ್ಷು ಸಲಹೆಗಾರರುಗಳು ಉದ್ದಿಮೆಗಳಿಗೆ ಖುದ್ದು ಬೇಟಿ ನೀಡಿ, ಶಿಶಿಕ್ಷು ಕಾಯ್ದೆಯನುಸಾರ 30ಕ್ಕಿಂತಲು ಹೆಚ್ಚಿನ ಮಾನವ ಸಂಪನ್ಮೂಲ ಹೊಂದಿರುವ ಉದ್ದಿಮೆದಾರರಿಗೆ ಕಡ್ಡಾಯವಾಗಿ 2.5% ಯಿಂದ 15% ವರೆಗೆ ಶಿಶಿಕ್ಷುಗಳನ್ನು ತರಬೇತಿಗೆ ಅಳವಡಿಸಿಕೊಳ್ಳುವಂತೆ ಅರಿವು ಮೂಡಿಸಲಾಗುತ್ತಿದೆ.<br><br>ಕೌಶಲ್ಯ ಅಭಿವೃದ್ಧಿ ಕುರಿತು ಯುವಜನರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗಿದೆ.<br><br>**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ**<br><br>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ವಿದೇಶಿ ಉದ್ಯೋಗ ಕೋಶ (ಐ.ಎಂ.ಸಿ-ಕೆ)ದ ಮೂಲಕ ವಿದೇಶಿ ಉದ್ಯೋಗಾವಕಾಶಗಳ ಬಗ್ಗೆ ಸಾರ್ವಜನಿಕ ಮಾಧ್ಯಮ, ಕರಪತ್ರಗಳ ವಿತರಣೆ, ಪತ್ರಿಕೆಗಳಲ್ಲಿ ಪ್ರಕಟಣೆ, ಜಾಥ, ಜಿಲ್ಲಾ ಮಟ್ಟದ ಸಪ್ತಾಹಗಳನ್ನು ಏರ್ಪಡಿಸುವ ಮೂಲಕ ಅರಿವು ಮೂಡಿಸಲಾಗುತ್ತಿರುತ್ತದೆ. ಇದರಿಂದ ಯುವಜನತೆಯ ಜೀವನೋಪಾಯವನ್ನು ಸುಧಾರಿಸುವ ಹಾಗೂ ಸ್ವಯಂ ಉದ್ಯೋಗಿಗಳನ್ನಾಗಿಸುವ ಗುರಿಯನ್ನು ಹೊಂದಲಾಗಿದೆ.<br><br>**ರಾಷ್ಟ್ರೀಯ ಜೀವನೋಪಾಯ ಅಭಿಯಾನ**<br>**(ದೀನ್‌ದಯಾಳ್-ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ)**<br>ಡೇ-ನಲ್ಮ್ ಅಭಿಯಾನದಡಿ ಈ ಕೆಳಕಂಡ ಉದ್ದೇಶಿತ ಗುಂಪಿಗೆ ಕೌಶಲ್ಯಾಭಿವೃದ್ಧಿ ಬಗ್ಗೆ ಅರಿವು ಕಾರ್ಯಕ್ರಮ ಮೂಡಿಸಲಾಗಿರುತ್ತದೆ.<br><br>• ಪತ್ರಿಕಾ ಪ್ರಕಟಣೆ, ಸ್ಥಳೀಯ ಮಾಧ್ಯಮ ಇತ್ಯಾದಿಗಳ ಮೂಲಕ ಮಾಹಿತಿಯನ್ನು ನಗರ ಸ್ಥಳೀಯ ಸಂಸ್ಥೆಯಿಂದ ಸಾರ್ವಜನಿಕರಿಗೆ, ನಗರದ ನಿರುದ್ಯೋಗ ಯುವಕ ಯುವತಿಯರಿಗೆ, ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರಿಗೆ ಹಾಗೂ ಪ್ರದೇಶ ಮಟ್ಟದ ಒಕ್ಕೂಟದ ಸದಸ್ಯರಿಗೆ ಅರಿವು ಮೂಡಿಸಲಾಗಿದೆ.<br>• 2022-23ನೇ ಸಾಲಿನಲ್ಲಿ ವಿಜಯಪುರ ಜಿಲ್ಲೆಗೆ ಸಂಭಂದಪಟ್ಟಂತೆ, ವಿಜಯಪುರ ಮಹಾನಗರ ಪಾಲಿಕೆಯಲ್ಲಿ 1290 ಫಲಾನುಭವಿಗಳು ವಿವಿಧ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳ ಅನುಕೂಲವನ್ನು ಪಡೆದುಕೊಂಡಿರುತ್ತಾರೆ.<br><br>**ಸಂಜೀವಿನಿ- ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆ (ಡೇ-ಎನ್‌ಆರ್‌ಎಲ್‌ಎಂ)**<br>ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯಡಿ ಅನುಷ್ಠಾನಗೊಳಿಸಲಾಗುತ್ತಿರುವ ದೀನ್‌ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಚಟುವಟಿಕೆಗಳ ವಿವರ ಈ ಕೆಳಗಿನಂತಿದೆ.<br><br>• ಡಿಡಿಯು-ಜಿಕೆವೈ ಯೋಜನೆಯಡಿ ರಾಜ್ಯದಲ್ಲಿನ 31034 ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗಿದೆ.<br>• 16477 ವಿದ್ಯಾರ್ಥಿಗಳಿಗೆ (ಯುವಕ/ಯುವತಿಯರಿಗೆ) ಸಂದರ್ಶನ ಏರ್ಪಡಿಸಿ ಯೋಜನೆಯ ಬಗ್ಗೆ ಅರಿವು ಮೂಡಿಸಲಾಗಿದೆ.<br>• 3643 ವಿದ್ಯಾರ್ಥಿಗಳಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಲಾಗಿದೆ. ವಿವರವನ್ನು **ಅನುಬಂಧ-3**ರಲ್ಲಿ ಲಗತ್ತಿಸಿದೆ. |

| | |
|---|---|
| | • ಆರ್‌ಸೆಟಿ ಯೋಜನೆಯಡಿ 31 ಜಿಲ್ಲೆಗಳ 127033 ಕುಟುಂಬಗಳಿಗೆ ಅರಿವು ಮೂಡಿಸಲಾಗಿದೆ.<br>• 115634 ವಿದ್ಯಾರ್ಥಿಗಳಿಗೆ (ಯುವಕ/ಯುವತಿಯರಿಗೆ) ಸಂದರ್ಶನ ಮಾಡಿ ಯೋಜನೆಯ ಬಗ್ಗೆ ಅರಿವು ಮೂಡಿಸಿ ತರಬೇತಿಯನ್ನು ನೀಡಲಾಗಿದೆ.<br><br>ಕೌಶಲ್ಯಾಭಿವೃದ್ಧಿ ಯೋಜನೆಗಳಿಂದ ಯುವಕರು ಸರ್ಕಾರಿ ಉದ್ಯೋಗದ ಮೇಲೆ ಅವಲಂಬಿತರಾಗದೆ ಕೌಶಲ್ಯಾಭಿವೃದ್ಧಿಯನ್ನು ಹೊಂದಿ ಉದ್ಯೋಗದ ಅವಕಾಶವನ್ನು ಪಡೆದಿರುತ್ತಾರೆ ಹಾಗೂ ಸ್ವಯಂ ಉದ್ಯೋಗಿಗಳಾಗಿರುತ್ತಾರೆ.<br><br>ಪ್ರಮುಖವಾಗಿ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ಒದಗಿಸುವಲ್ಲಿ ಸ್ವ-ಸಹಾಯ ಗುಂಪಿನ ಸದಸ್ಯರುಗಳ ಕುಟುಂಬದ ವಿದ್ಯಾರ್ಥಿಗಳಿಗೆ ಮತ್ತು ಯುವಕರಿಗೆ ಆದ್ಯತೆ ನೀಡುತ್ತಿರುವುದರಿಂದ ಸದರಿ ಕುಟುಂಬದಡಿ ಒಂದಕ್ಕಿಂತ ಹೆಚ್ಚು ಜೀವನೋಪಾಯ ಉದ್ಯೋಗಗಳನ್ನು ಕೈಗೊಳ್ಳಲು ಅನುಕೂಲಗಳಾಗಿ ಅವರ ಕುಟುಂಬದ ಆರ್ಥಿಕ ಸ್ಥಿತಿಗಳು ಸುಧಾರಣೆಯಾಗಿ ಉತ್ತಮ ಮಟ್ಟದ ಜೀವನ ನಡೆಸಲು ಸಹಾಯಕವಾಗುತ್ತಿದೆ. |

ಸಂಖ್ಯೆ: ಕೌಉಜೀಇ 16 ಕೌಗುಪ್ರ 2023

(ಡಾ. ಶರಣಪ್ರಕಾಶ ಆರ್ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ
ಇಲಾಖಾ ಸಚಿವರು.

## ಅನುಬಂಧ-1

| ಕ್ರಮ. ಸಂಖ್ಯೆ | ತಾಲೂಕುಗಳ ಹೆಸರುಗಳು | ಸಿಎಂಕೆಕೆವೈ | | ಪಿಎಂಕೆವಿವೈ | |
|---|---|---|---|---|---|
| | | 21-22ನೇ ಸಾಲಿನಲ್ಲಿ ತರಬೇತಿ ಪಡೆದವರ ಸಂಖ್ಯೆ | 22-23ನೇ ಸಾಲಿನಲ್ಲಿ ತರಬೇತಿ ಪಡೆದವರ ಸಂಖ್ಯೆ | 21-22ನೇ ಸಾಲಿನಲ್ಲಿ ತರಬೇತಿ ಪಡೆದವರ ಸಂಖ್ಯೆ | 22-23ನೇ ಸಾಲಿನಲ್ಲಿ ತರಬೇತಿ ಪಡೆದವರ ಸಂಖ್ಯೆ |
| 1 | ಅಲ್‌ಮೆಲ್ | 90 | 60 | 0 | 0 |
| 2 | ಬಸವನ ಬಾಗೇವಾಡಿ | 120 | 120 | 0 | 0 |
| 3 | ದೇವರ ಹಿಪ್ಪರಗಿ | 120 | 120 | 0 | 0 |
| 4 | ಇಂಡಿ | 390 | 1050 | 180 | 0 |
| 5 | ಮುದ್ದೇಬಿಹಾಳ | 120 | 240 | 0 | 0 |
| 6 | ನಿಡಗುಂಡಿ | 180 | 600 | 0 | 0 |
| 7 | ಸಿಂದಗಿ | 270 | 60 | 60 | 0 |
| 8 | ತಿಕೋಟಾ | 0 | 240 | 0 | 0 |
| 9 | ತಾಳಿಕೋಟೆ | 0 | 12 | 0 | 0 |
| 10 | ವಿಜಯಪುರ | 420 | 98 | 630 | 0 |
| | ಒಟ್ಟು | **1910** | **2600** | **870** | **0** |

(ರಾಜು ಹೆಚ್ ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

ಅನುಬಂಧ-2

| ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಯೋಜನೆಯಡಿಯಲ್ಲಿ ವಿಜಯಪುರ ಜಿಲ್ಲೆಯಾದ್ಯಂತ ಕೈಗೊಂಡಿರುವ ಎನ್‌ಆರ್‌ಎಲ್‌ಎಮ್ ಯೋಜನೆಯಡಿ 2 ವರ್ಷದ ಪ್ರಗತಿ ಈ ಕೆಳಕಂಡಂತಿವೆ. | | | | | |
|---|---|---|---|---|---|
| ಕ್ರಮ. ಸಂಖ್ಯೆ | ತಾಲೂಕುಗಳ ಹೆಸರುಗಳು | ಸ್ವ ಸಹಾಯ ಗುಂಪುಗಳ ರಚನೆ | | ಸ್ವ ಸಹಾಯ ಬಂಡವಾಳ ನಿಧಿ ಪಡೆದು ಉದ್ಯೋಗ ಕೈಗೊಂಡಿರುವ ಸ್ವ ಸಹಾಯ ಗುಂಪುಗಳ ಸಂಖ್ಯೆ | |
| | | 21-22 | 22-23 | 21-22 | 22-23 |
| 1 | ಅಲ್‌ಮೇಲ್ | 12 | 38 | 0 | 5 |
| 2 | ಬಸವನ ಬಾಗೇವಾಡಿ | 9 | 18 | 15 | 0 |
| 3 | ಬಬಲೇಶ್ವರ | 24 | 35 | 7 | 10 |
| 4 | ಚಡಚಣ | 6 | 9 | 4 | 2 |
| 5 | ದೇವರ ಹಿಪ್ಪರಗಿ | 12 | 29 | 0 | 3 |
| 6 | ಭಾರತ | 19 | 57 | 18 | 10 |
| 7 | ಕೋಲ್ಹಾರ್ | 14 | 72 | 5 | 5 |
| 8 | ಮುದ್ದೇಬಿಹಾಳ | 24 | 226 | 5 | 4 |
| 9 | ನಿಡಗುಂಡಿ | 18 | 34 | 8 | 3 |
| 10 | ಸಿಂದಗಿ | 12 | 53 | 0 | 3 |
| 11 | ತಿಕೋಟಾ | 12 | 5 | 11 | 4 |
| 12 | ತಾಳಿಕೋಟೆ | 9 | 73 | 6 | 3 |
| 13 | ವಿಜಯಪುರ | 5 | 10 | 6 | 9 |
| | ಒಟ್ಟು | **176** | **659** | **85** | **61** |

(ರಾಜು ಹೆಚ್ ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

**ಅನುಬಂಧ-3**

| ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಯೋಜನೆಯಡಿಯಲ್ಲಿ ವಿಜಯಪುರ ಜಿಲ್ಲೆಯಾದ್ಯಂತ ಕೈಗೊಂಡಿರುವ ಡಿಡಿಯು-ಜಿಕೆವೈ ಮತ್ತು ಆರ್‌ಸೆಟಿ ಯೋಜನೆಯಡಿ 2 ವರ್ಷದ ಪ್ರಗತಿ ಈ ಕೆಳಕಂಡಂತಿವೆ. (ತಾಲೂಕುವಾರು ಮಾಹಿತಿ ಲಭ್ಯವಿರುವುದಿಲ್ಲ) | | | | | | | |
|---|---|---|---|---|---|---|---|
| ಕ್ರಮ. ಸಂಖ್ಯೆ | ವರ್ಷ | ದಿನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ | | | ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಕೇಂದ್ರಗಳ ಯೋಜನೆ | | |
| | | ತರಬೇತಿ ಪಡೆದವರ ಸಂಖ್ಯೆ | | ವೇತನಾಧಾರಿತ ಉದ್ಯೋಗ ಪಡೆದವರ ಸಂಖ್ಯೆ | ತರಬೇತಿ ಪಡೆದವರ ಸಂಖ್ಯೆ | | ಸ್ವಯಂ ಉದ್ಯೋಗ ನಿರ್ವಹಿಸುತ್ತಿರುವ ಸಂಖ್ಯೆ |
| | | ಗುರಿ | ಸಾಧನೆ | ಸಾಧನೆ | ಗುರಿ | ಸಾಧನೆ | ಸಾಧನೆ |
| 1 | 2021-22 | 150* | 49 | 49 | 75 | 384 | 315 |
| 2 | 2022-23 | | 41 | 41 | 750 | 566 | 410 |

(ರಾಜು ಹೆಚ್ ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ